03/19

## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್-3235/2014

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ: 08/11/2016.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರ ಅನ್ವಯ ಶಿಫಾರಸ್ಸು ವರದಿ

ವಿಷಯ: ಪೀಠೋಪಕರಣಗಳ ಖರೀದಿಗೆ ಎಂದು ರೂ.36,170/- ಗಳನ್ನು ಪಡೆದು, ಸದರಿ ಮೊತ್ತವನ್ನು ಸ್ವಂತಕ್ಕೆ ಬಳಸಿಕೊಂಡು ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವ ಸಂಬಂಧ ಸದರಿಯವರ ವಿರುದ್ದ ದಂಡ ಸಂಹಿತೆಯ ಅಡಿಯಲ್ಲಿ ಕ್ರಿಮಿನಲ್ ಮೋಕದ್ದಮೆ ಹೂಡುವುದಲ್ಲದೆ ಅವರಿಂದ ಆಗಿರುವ ನಷ್ಟ ರೂ.36,170/- ಗಳನ್ನು ಸದರಿಯವರಿಂದ ಸಿವಿಲ್ ಕಾನೂನಿನಡಿಯಲ್ಲಿ ವಸೂಲಾತಿ ಕ್ರಮ ಜರುಗಿಸಿ ಸರ್ಕಾರಕ್ಕೆ ಜಮಾ ಮಾಡಿಕೊಳ್ಳುವುದರ ನಡವಳಿಕೆ - ಕುರಿತು.,

*****

ಶ್ರೀ ರಫೀವುಲ್ಲ ಬಿನ್ ಬಿ.ಎ.ಭಾಷಾ, ವಿ.ವಿ.ಪುರಂ, ಮಂಡ್ಯ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ಶ್ರೀ ಎನ್.ಜಿ.ಚನ್ನಿಗರಾಯ, ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಪ್ರಾಧೀಕಾರ, ಮಂಡ್ಯ ಜಿಲ್ಲೆ, ಮಂಡ್ಯ (ಹಾಲಿ ಕರ್ನಾಟಕ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಪ್ರಾಧೀಕಾರ, ಮಂಡ್ಯ ಜಿಲ್ಲೆ, ಮಂಡ್ಯ) (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ದಾಖಲಿಸಿ, ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯುತ್ ಸಂಪರ್ಕಕ್ಕಾಗಿ ಠೇವಣಿಯಾಗಿ ಇಟ್ಟಿರುವ ಹಣ ರೂ.36,170/- ಗಳನ್ನು ಚೆಕ್ ನಂ. 147524 ದಿನಾಂಕ: 07/07/2014 ರೀತ್ಯಾ ಕಛೇರಿಯ ಪೀಠೋಪಕರಣಗಳ ಖರೀದಿ ಹೆಸರಿನಲ್ಲಿ ಹಣ ಪಡೆದುಕೊಂಡು, ಸದರಿ ಹಣವನ್ನು ಸ್ವಂತಕ್ಕಾಗಿ ದುರುಪಯೋಗ ಮಾಡಿಕೊಂಡಿರುತ್ತಾರೆಂದು ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ಸದರಿ ದೂರನ್ನು ದಾಖಲು ಮಾಡಿಕೊಂಡು, ದೂರಿನಲ್ಲಿನ ಸತ್ಯಾಂಶ ಅರಿಯಲು, ದೂರಿನ ತನಿಖೆ ಕೈಗೊಳ್ಳಲು ಸದರಿ ಸಂಸ್ಥೆಯ ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಡ್ಯ ಇವರಿಗೆ ವಹಿಸಿದ್ದು (ಇನ್ನು ಮುಂದೆ ತನಿಖಾಧಿಕಾರಿ ಎಂದು ಸಂಬೋಧಿಸಲಾಗುವುದು), ತನಿಖಾಧಿಕಾರಿಗಳು ದಿನಾಂಕ: 18/02/2015 ರಂದು ಪರಿಶೀಲನೆ ನಡೆಸಿ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ.

3. **ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ:**

(1) ಎದುರುದಾರರು ಜಿಲ್ಲಾ ಮಟ್ಟದ ಜವಾಬ್ದಾರಿಯುತ ಸರ್ಕಾರಿ ಅಧಿಕಾರಿಯಾಗಿದ್ದು, ಸರ್ಕಾರದ ಹಣವನ್ನು ತನ್ನ ಇಚ್ಛಾನುಸಾರ ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಪೀಠೋಪಕರಣಗಳ ಖರೀದಿ ನೆಪದಲ್ಲಿ ಚೆಕ್ ನಂ. 137524ನ್ನು ಇಲಾಖೆಯ ಹೆಸರಿನಲ್ಲಿರುವ ಖಾತೆಗೆ ಚೆಕ್‌ನ್ನು ನೀಡಿ ನಂತರ ಅದನ್ನು ಎಂಡಾರಸ್ಮೆಂಟ್ ಮಾಡಿ ನಂತರ ತನಗೆ ಪರಿಚಯವಿರುವ ವ್ಯಕ್ತಿ ಮುಖಾಂತರ ರೂ.36,170/- ಹಣವನ್ನು ಪಡೆದುಕೊಂಡು ಸ್ವಂತಕ್ಕೆ ಉಪಯೋಗಿಸಿದ್ದಾಗಿರುತ್ತದೆ.

(2) ಭೌತಿಕವಾಗಿ ಕಛೇರಿಯಲ್ಲಿ ಪರಿಶೀಲಿಸಲಾಗಿ ಯಾವುದೇ ಹೊಸದಾದ ಪೀಠೋಪಕರಣಗಳನ್ನು ಖರೀದಿಸಿ ಜೋಡಿಸಿರುವುದಿಲ್ಲ.

(3) ಎದುರುದಾರರು ಯಾವ ಸಾರ್ವಜನಿಕರ ಬೇಟಿಗೂ ಸಿಗುವುದಿಲ್ಲ. ಪ್ರತಿ ದಿವಸ ಕಛೇರಿಗೆ ಬರದೆ ಬೇರೆ ಕಡೆ ಹೋಗಿ ಕಛೇರಿ ವೇಳೆ ಮುಗಿದ ನಂತರ ಬಂದು ಕಾಗದ ಪತ್ರಗಳಿಗೆ ಸಹಿ ಮಾಡಿ ಹೋಗುವ ಪರಿಪಾಠವಿಟ್ಟುಕೊಂಡಿರುವುದು ವಿಚಾರಣೆಯಿಂದ ತಿಳಿದುಬಂದಿರುತ್ತದೆ.

(4) ಎದುರುದಾರರ ಆಪಾದನೆಗೆ ಸಂಬಂಧಪಟ್ಟಂತೆ ವಿವರಣೆ ನೀಡಲು ನೋಟಿಸ್ ಕೊಟ್ಟು ಕರೆಸಿದಾಗ ಸಮಂಜಸವಾದ ವಿವರಣೆ ನೀಡದೆ ಅಸಂಬಂದ್ಧವಾದ ಹೇಳಿಕೆ ನೀಡಿ ತನ್ನ ಜವಾಬ್ದಾರಿಯಿಂದ ನುಣುಚಿಕೊಂಡಿರುತ್ತಾರೆ.

(5) ಆದ್ದರಿಂದ ಸದರಿಯವರ ವಿರುದ್ದ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕ್ರಿಮಿನಲ್ ಪ್ರಕರಣ ದಾಖಲಿಸಲು ಸೂಕ್ತ ಆದೇಶ ಮಾಡಬೇಕಾಗಿ ಕೋರಿರುತ್ತಾರೆ.

4. ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ವರದಿಯನ್ನು ಎದುರುದಾರರಿಗೆ ಕಳುಹಿಸಿ, ಈ ಬಗ್ಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ. ಆದರೆ, ಎದುರುದಾರರು ಈ ಕಛೇರಿಯಿಂದ ಕಳುಹಿಸಲಾದ ನೋಟಿಸ್‌ಗಳನ್ನು ಸ್ವೀಕರಿಸಿದರೂ ಸಹಾ, ಯಾವುದೇ ಆಕ್ಷೇಪಣೆಗಳನ್ನು/ಉತ್ತರವನ್ನು ನಿಗಧಿತ ದಿನಾಂಕದೊಳಗಾಗಿ ಸಲ್ಲಿಸಿರುವುದಿಲ್ಲ. ಆದ್ದರಿಂದ, ಸದರಿ ಪ್ರಕರಣದಲ್ಲಿ ಎದುರುದಾರರ ಆಕ್ಷೇಪಣೆಗಳೇನೂ ಇರುವುದಿಲ್ಲವೆಂದು ಪರಿಗಣಿಸಲಾಗಿದೆ.

5. ದೂರಿನಲ್ಲಿ ಇರುವ ಆಪಾದನೆಗಳು ಹಾಗೂ ತನಿಖಾ ವರದಿಯನ್ನ ಕೂಲಂಕಷವಾಗಿ ಪರಿಶೀಲಿಸಲಾಗಿ ಎದುರುದಾರರು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

(1) ಎದುರುದಾರರು ಜಿಲ್ಲಾ ಮಟ್ಟದ ಜವಾಬ್ದಾರಿಯುತ ಸರ್ಕಾರಿ ಅಧಿಕಾರಿಯಾಗಿದ್ದು, ಸರ್ಕಾರದ ಹಣವನ್ನು ತನ್ನ ಇಚ್ಛಾನುಸಾರ ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಪೀಠೋಪಕರಣಗಳ ಖರೀದಿ ನೆಪದಲ್ಲಿ ಚೆಕ್ ನಂ. 137524ನ್ನು ಇಲಾಖೆಯ ಹೆಸರಿನಲ್ಲಿರುವ ಖಾತೆಗೆ ಚೆಕ್‌ನ್ನು ನೀಡಿ ನಂತರ ಅದನ್ನು ಎಂಡಾರಸ್ಸ್‌ಮೆಂಟ್ ಮಾಡಿ ನಂತರ ತನಗೆ ಪರಿಚಯವಿರುವ ವ್ಯಕ್ತಿ ಮುಖಾಂತರ ರೂ.36,170/- ಹಣವನ್ನು ಪಡೆದುಕೊಂಡು ಸ್ವಂತಕ್ಕೆ ಉಪಯೋಗಿಸಿಕೊಂಡಿರುತ್ತಾರೆ.

(2) ಭೌತಿಕವಾಗಿ ತನಿಖಾಧಿಕಾರಿಗಳು ಕಛೇರಿಯಲ್ಲಿ ಪರಿಶೀಲಿಸಲಾಗಿ ಯಾವುದೇ ಹೊಸದಾದ ಪೀಠೋಪಕರಣಗಳನ್ನು ಖರೀದಿಸಿ ಜೋಡಿಸಿರುವುದು ಕಂಡುಬರುವುದಿಲ್ಲ. ಇದರಿಂದ ಎದುರುದಾರರು ರೂ.36,170/- ಸರ್ಕಾರದ ಹಣವನ್ನು ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಳ್ಳುವುದರ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

(3) ಎದುರುದಾರರು ಯಾವ ಸಾರ್ವಜನಿಕರ ಬೇಟಿಗೂ ಸಿಗುವುದಿಲ್ಲ. ಪ್ರತಿ ದಿವಸ ಕಛೇರಿಗೆ ಬರದೆ ಬೇರೆ ಕಡೆ ಹೋಗಿ ಕಛೇರಿ ವೇಳೆ ಮುಗಿದ ನಂತರ ಬಂದು

ಕಾಗದ ಪತ್ರಗಳಿಗೆ ಸಹಿ ಮಾಡಿ ಹೋಗುವ ಪರಿಪಾಠವಿಟ್ಟುಕೊಂಡು ತಮ್ಮ ಕರ್ತವ್ಯ ಪಾಲನೆಯನ್ನು ಸರಿಯಾಗಿ ನಿರ್ವಹಿಸದೇ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

(4) ಎದುರುದಾರರ ಆಪಾದನೆಗೆ ಸಂಬಂಧಪಟ್ಟಂತೆ ವಿವರಣೆ ನೀಡಲು ನೋಟಿಸ್ ಕೊಟ್ಟು ಕರೆಸಿದಾಗ ಸಮಂಜಸವಾದ ವಿವರಣೆ ನೀಡದೆ ಅಸಂಬಂದ್ಧವಾದ ಹೇಳಿಕೆ ನೀಡಿ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

6. ದೂರುದಾರರು ದೂರು ಹಾಗೂ ತನಿಖಾಧಿಕಾರಿಗಳ ವರದಿ ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ 'ಎದುರುದಾರರ' ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, 'ಎದುರುದಾರರು' ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

7. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಪೀಠೋಪಕರಣಗಳ ಖರೀದಿಗೆ ಎಂದು ರೂ.36,170/- ಗಳನ್ನು ಪಡೆದು, ಸದರಿ ಮೊತ್ತವನ್ನು ಸ್ವಂತಕ್ಕೆ ಬಳಸಿಕೊಂಡು ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವ ಸಂಬಂಧ ಸದರಿಯವರ ವಿರುದ್ದ ದಂಡ ಸಂಹಿತೆಯ ಅಡಿಯಲ್ಲಿ ಕ್ರಿಮಿನಲ್ ಮೋಕದ್ದಮೆ ಹೂಡುವುದಲ್ಲದೆ ಅವರಿಂದ ಆಗಿರುವ ನಷ್ಟ ರೂ.36,170/- ಗಳನ್ನು **ಸಿವಿಲ್ ಕಾನೂನಿನಡಿಯಲ್ಲಿ ವಸೂಲಾತಿ ಕ್ರಮ ಜರುಗಿಸಿ ಸರ್ಕಾರಕ್ಕೆ ಜಮಾ ಮಾಡಿಕೊಳ್ಳಲು** ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ

ವರದಿ ಮುಟ್ಟಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**